ರ್ಯಾಲಿಯನ್ನು ಇಟ್ಟುಕೊಂಡು ಮಾನ್ಯ ರಾಜ್ಯಪಾಲರನ್ನು ಹಾಗೂ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗುವ ಬಗ್ಗೆ ತೀರ್ಮಾನ ಮಾಡಿದ್ದಾರೆ. ಕಾವೇರಿ ನದಿ ಏರಿಯಾದಲ್ಲಿ ಕಬ್ಬುಬೆಳೆಗಾರರಾದ ರೈತರು ಇರಬಹುದು ನೀರನ್ನು ಬಿಡುವಲ್ಲಿ ಇವತ್ತು ಕಾವೇರಿ ಬೆಲ್ಟಿನಲ್ಲಿ ಕೃತಕವಾದ ಬರಗಾಲ ನಿರ್ಮಾಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತಮ್ಮ ಭಾಷಣದಲ್ಲಿ ಹೇಳಿದರು, ನಾವು ಸರಿಯಾದ ರೀತಿಯಾದಂಥ ವ್ಯವಸ್ಥೆಯನ್ನು ಮಾಡಿದ್ದೇವೆ, ಇಲ್ಲದಿದ್ದರೆ ರೈತರು ದಂಗೆ ಏಳುತ್ತಿದ್ದರೆಂದು ಹೇಳಿದರು. ಅವರ ಬಗ್ಗೆ ನಾವು ವಿವರವಾಗಿ ಮಾತನಾಡಬೇಕಾಗುತ್ತದೆ. ಹೀಗಾಗಿ ಅಲ್ಲಿ ಒಂದು ರೀತಿಯಾದ ಆಕ್ರೋಶವಾದ ಭಾವನೆ ಅಲ್ಲಿ ಮೂಡುತ್ತಿದೆ. ಅದರ ಬಗ್ಗೆ ನಾವು ಡಿಟೇಲ್ಸ್ ಆಗಿ ಚರ್ಚೆಯನ್ನು ನಾವು ಮಾಡಬೇಕಾಗುತ್ತದೆ. ಆ ರೈತರ ಹಿತವನ್ನು ನಾವು ರಕ್ಷಣೆ ಮಾಡುವ ಕೆಲಸವಾಗಬೇಕಾಗಿದೆ. ಈ ಸದನದಲ್ಲಿ ಅದರ ಬಗ್ಗೆ ವಿಶೇಷವಾಗಿ ಚರ್ಚೆಯಾಗಬೇಕಾಗುತ್ತದೆ. ಕಾವೇರಿ ನಿಗಮವನ್ನು ಮಾಡಿದ್ದು ರೈತರು ಬೆಳೆಯನ್ನು ಕಳೆದುಕೊಂಡ ಬಗ್ಗೆ ಅಲ್ಲಿ ಪರಿಹಾರವನ್ನು ಕೊಡಬೇಕಾಗುತ್ತದೆ, ಅಲ್ಲಿ ಸಾಲವನ್ನು ಮನ್ನಾ ಮಾಡುವಂಥದ್ದು ಆಗಬೇಕಾಗುತ್ತದೆ. ಇದರ ಸಲುವಾಗಿ ನಾವು ವಿಶೇಷವಾದ ಒಂದು ಚರ್ಚೆಯನ್ನು ಮಾಡಬೇಕಾಗಿದೆ, ಅದಕ್ಕಾಗಿ ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಸರ್ಕಾರದವರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ, ಆಮೇಲೆ ನಾನು ನಿರ್ಧಾರವನ್ನು ತಮಗೆ ತಿಳಿಸುತ್ತೇನೆ.

(ಈ) ವಿಷಯ: ತಹಸೀಲ್ದಾರ್‌ರವರು ಶಾಸಕರ ಮೇಲೆ ಕೊಲೆಬೆದರಿಕೆ ಕೇಸ್ ದಾಖಲು ಮಾಡಿರುವ ಬಗ್ಗೆ

ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಅಧ್ಯಕ್ಷರೆ, ತಹಸೀಲ್ದಾರ್‌ರವರು ಶಾಸಕರು ನನಗೆ ಕೊಲೆ ಬೆದರಿಕೆ ಹಾಕಿದ್ದಾರೆಂದು ದೂರು ದಾಖಲೆ ಮಾಡಿ ಕೇಸ್ ಆಗಿದೆ. ನಿನ್ನೆಯಲ್ಲ ಮೊನ್ನೆ ಒಂದು ಪ್ರಶ್ನೆಯಾಗಿದೆ, ಅಕ್ರಮ ಸಕ್ರಮ ಸಾಗುವಳಿಯ ಬಗ್ಗೆ ಶ್ರೀ ಗೋಪಾಲ್ ಪೂಜಾರಿಯವರು ಒಂದು ಪ್ರಶ್ನೆಯನ್ನು ಮಾಡಿದ್ದಾರೆ, ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿರುವ ಅಕ್ರಮ ಸಕ್ರಮ ಸಮಿತಿಗಳನ್ನು ಪರಿಶೀಲಿಸಿ ಮಂಜೂರಾತಿ ಮಾಡಿರುವ ಬಗ್ಗೆ ಅಧಿಕಾರಿಗಳು ಅದನ್ನು ತಡೆಹಿಡಿಯಲು ಕಾನೂನಿನಲ್ಲಿ ಅವಕಾಶವಿದೆಯೇ? ಈ ಒಂದು ಸಮಿತಿಯನ್ನು ನಾನು ಕರೆದಿದ್ದೆ, ನನ್ನ ಕ್ಷೇತ್ರದಲ್ಲಿ 6740 ಅರ್ಜಿಗಳು ಇವೆ, ಇದುವರೆಗೂ ಎರಡುವರೆ ವರ್ಷವಾಗಿದೆ ಒಂದೇ ಒಂದು ಹಕ್ಕುಪತ್ರವನ್ನು ತಹಸೀಲ್ದಾರವರು ಕೊಡಲಿಲ್ಲ. 22ನೇ ತಾರೀಖಿನಂದು ನಾನು ಒಂದು ಸಭೆಯನ್ನು ಕರೆದಿದ್ದೆ ಅದಕ್ಕೆ ತಹಸೀಲ್ದಾರವರು ಉತ್ತರವನ್ನು ಕೊಡುತ್ತಾರೆ, ಹಿಂದಿನ ಯಾವುದೇ ಶಾಸಕರು ಮಂಜೂರು ಮಾಡಿದ್ದರೆ ಆ ಮಂಜೂರಾತಿಯ ಹಕ್ಕುಪತ್ರಗಳನ್ನು ನಾನು ಕೊಡುವುದಕ್ಕಾಗುವುದಿಲ್ಲ. ಅವರು ಮತ್ತೆ ನಾನು ಪರಿಶೀಲನೆ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಹಿಂದಿನ ಶಾಸಕರಿಗೆ ಅಗೌರವ, ಇಂದಿನ ಶಾಸಕರಿಗೆ ಯಾವುದೇ ಒಂದು ಸಮಿತಿಯ ಅಧಿಕಾರಿ ಇಲ್ಲವೆನ್ನುವ ಬಗ್ಗೆ ತಹಸೀಲ್ದಾರವರು ಹೇಳುತ್ತಾರೆ. ಮತ್ತೊಂದು ವಿಚಾರ, ಬಹುತೇಕ ಶಾಸಕರಿಗೆ ತಪ್ಪು ಮಾಹಿತಿಯನ್ನು ನೀಡುವುದು, ಇತ್ತೀಚೆಗೆ ಸರ್ಕಾರದ ಆದೇಶವಿದೆ, ಯಾವ ಕಡುಬಡವ ರೈತ ಸರ್ಕಾರದ ಭೂಮಿಯನ್ನು ಸಾಗುವಳಿ ಮಾಡುತ್ತಿರುತ್ತಾನೆ, ಅವನಿಗೆ 4 ಎಕರೆ 38 ಗುಂಟೆಯ ಒಳಗಡೆ ಇದ್ದರೆ ಜಮೀನು ಮಂಜೂರು ಮಾಡುವಂತಿಲ್ಲ, ಅದರ ಒಳಗಡೆ ಇರುವಂಥ ಯಾವುದೇ

ರೈತನಿಗೆ ಇನ್‌ಕಂ ಪ್ರೈಯಾರಿಟಿ ಇರಬಹುದು, ಕುಟುಂಬದಲ್ಲಿ ಹೆಚ್ಚು ಭೂಮಿ ಇಲ್ಲವೆಂದು ಮಂಜೂರು ಮಾಡಬೇಕೆಂದು ಇದೆ. ಅದರಲ್ಲಿ ನೀಲಗಿರಿ ಅಥವಾ ಯಾವುದೇ ಗಿಡಗಳು ಇದ್ದರೂ ಮಂಜೂರು ಮಾಡಬೇಕೆಂದು ಇದ್ದರೂ ಸಹಿತ, ಅದರಲ್ಲಿ ನೀಲಗಿರಿ ಮರ ಇದೆ ಅದಕ್ಕಾಗಿ ಅದನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರಕ್ಕೆ ಅನುಮತಿಯನ್ನು ಕೇಳಬೇಕಾಗುತ್ತದೆಂದು ಅವನು ಉದ್ಧಟತನದ ಉತ್ತರವನ್ನು ತಹಸೀಲ್ದಾರ್ ಕೊಡುತ್ತಾರೆ ಮತ್ತೆ ನಮ್ಮ ಸದಸ್ಯರು, ಸ್ವಾಯಿ ಹಿಂದಿನ ಸಭೆಗಳ ನಡುವಳಿಕೆಗಳಿಗೆ ಸ್ಪಂದನ ಮಾಡಲಿಲ್ಲವೆಂದರೆ ನಾವು ಆ ಸಭೆಗಳಿಗೆ ಅಗೌರವ ತೋರಿಸುತ್ತದೆ ಎಂದು ಹೇಳಿದರೆ, ನನಗೆ ಕೊಡುವುದಕ್ಕಾಗುವುದಿಲ್ಲ ಎಂದು ರಜೆ ಹಾಕಿ ಹೋಗಿ ಬಿಡುವುದು. ತಾಲ್ಲೂಕು ದಂಡಾಧಿಕಾರಿಗಳಾಗಿ ತಾವು ಇಲ್ಲಿ ಇರಬೇಕಾಗಿದೆ ಸಾರ್ವಜನಿಕರ ಕೆಲಸಗಳನ್ನು ಮಾಡುವುದಕ್ಕೆ ತಾವು ಇಲ್ಲಿ ಇದ್ದೀರಿ ಎಂದು ಹೇಳಿದರೆ ಆ ತಹಸೀಲ್ದಾರವರು ನನ್ನ ಮೇಲೆ ಕೇಸ್‌ನ್ನು ಬುಕ್ ಮಾಡಿ ಕೊಲೆ ಬೆದರಿಕೆ ಹಾಕಿದ್ದಾರೆಂದು ಪೊಲೀಸ್ ರಕ್ಷಣೆಯನ್ನು ತೆಗೆದುಕೊಂಡು ಇವತ್ತು ತಹಸೀಲ್ದಾರ ಕಛೇರಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ನಾನೊಬ್ಬ ಅನಧಿಕೃತ ಸಾಗುವಳಿಯ ಸಕ್ರಮ ಸಮಿತಿಯ ಅಧ್ಯಕ್ಷನಾಗಿ ಶಾಸಕನಾಗಿ ನನ್ನ ಕಾರ್ಯವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವುದಿಲ್ಲವೆಂದರೆ ಹೇಗೆ? ಇದನ್ನು ನಾನು ಈಗಾಗಲೇ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈ ಒಂದು ಅಸಹಕಾರ ಬಹುತೇಕ ಶಾಸಕರ ಅನುಭವಕ್ಕೆ ಇದೆ, ಈ ಒಂದು ಅಕ್ರಮ ಸಕ್ರಮ ಸಾಗುವಳಿಯಲ್ಲಿ ಒಂದು ಹಕ್ಕುಪತ್ರವನ್ನು ಕೊಡುವುದಕ್ಕಾಗುವುದಿಲ್ಲವೆಂದರೆ ಶಾಸಕನಾಗಿ ಹೇಗೆ ಕಾರ್ಯವನ್ನು ನಿರ್ವಹಿಸಬೇಕು? ಇವತ್ತು ನಾನು ಸರ್ಕಾರವನ್ನು ಕೇಳುತ್ತೇನೆ, 94 ಸಿ. ನಲ್ಲಿ 100 ಕ್ಕೆ 90 ಭಾಗ ಯಾವುದೇ ಮನೆಗಳನ್ನು ಅಕ್ರಮ ಇರುವುದನ್ನು ಸಕ್ರಮ ಮಾಡಿ ಅವರ 50 ರೂ.ಗಳ ಅರ್ಜಿ ಶುಲ್ಕವನ್ನು ವಸೂಲು ಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಬಂದಿದೆ. ಒಂದು ಅರ್ಜಿಯನ್ನು ವಿಲೇವಾರಿ ಮಾಡಲಿಲ್ಲ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹಾಗೂ ಈ ತಹಸೀಲ್ದಾರ್‌ಗಳು ಏನು ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಶಾಸಕರ ಮೇಲೆ ಕೊಲೆ ಬೆದರಿಕೆಯ ಕೇಸ್‌ನ್ನು ಹಾಕಿದ್ದಾರೆಂದು ಅವರು ಹೇಳುತ್ತಿದ್ದಾರೆ. ಬ್ಯಾಕ್‌ಗ್ರೌಂಡ್ ಹೇಳುತ್ತಿದ್ದಾರೆ ಅಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಮ್ಮ ಏನಾದರೂ ಉತ್ತರ ಹೇಳುವುದಕ್ಕೆ ಬೇಕಲ್ಲವೇ?

ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಶ್ರೀಕಂಠಯ್ಯನವರೇ ಸ್ವಲ್ಪ ಗಮನಿಸಿ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಶಾಸಕನಾಗಿ ನಾನು ಕಾರ್ಯವನ್ನು ನಿರ್ವಹಿಸಬೇಕಾಗಿದೆ, ಸಮಾಜಕ್ಕೆ ಶಾಸಕನಾಗಿ ಉತ್ತರವನ್ನು ಕೊಡಬೇಕಾಗಿದೆ, ಇಡೀ ನಾಗರೀಕ ಸಮಾಜ ನನ್ನನ್ನು ಕೇಳುತ್ತಿದ್ದಾರೆ. ಸ್ವಾಯಿ, ಕಳೆದ 4 ವರ್ಷಗಳಿಂತ 500 ರಿಂದ 600 ಅರ್ಜಿಗಳು ಪರಿಶಿಷ್ಟ ಜಾತಿ ಜನಾಂಗದವರು 50 ರೂ.ಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಅದಕ್ಕಾಗಿ ಗ್ರಾಮೀಣ ಪ್ರದೇಶಗಳಿಗೆ ಜನಸಂಪರ್ಕ ಸಭೆಗಳನ್ನು ಹಾಕಿಕೊಳ್ಳಬೇಕಾಗಿದೆ. ಅವರು ಕಟ್ಟುವುದಕ್ಕಾಗುವುದಿಲ್ಲವೆಂದರೆ ಕಟ್ಟಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕಲ್ಲವೇ? ತಹಸೀಲ್ದಾರ್‌ಗೆ ದಿನಕ್ಕೆ ಒಂದು ಗಂಟೆ ಬರುವುದಕ್ಕಾಗುವುದಿಲ್ಲ, ಹಾಗೂ ಕಛೇರಿಯಲ್ಲಿಯೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲವೆಂದರೆ, ಯಾವ ಪುರುಷಾರ್ಥಕ್ಕಾಗಿ ಆ ತಹಸೀಲ್ದಾರ ಇರಬೇಕು,

ಹಿಂದೆ ಒಬ್ಬ ತಹಸೀಲ್ದಾರ್‌ನ್ನು ಕೊಟ್ಟಿದ್ದರು. ಮೂರು ಗಂಟೆಗೆ ಕಛೇರಿಯಲ್ಲಿ ಕುಡಿದು ಕುಳಿತುಕೊಳ್ಳುತ್ತಿದ್ದರು, ನಾವು ಯಾವರೀತಿಯಾಗಿ ಕಾರ್ಯವನ್ನು ನಿರ್ವಹಿಸಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಶ್ರೀಕಂಠಯ್ಯನವರಿಗೆ ಹೇಳೋಣ ಬಿಡಿ, ಅವರು ಎನ್‌ಕ್ವಾಯರಿ ಮಾಡಿಸುತ್ತಾರೆ ಬಿಡಿ.

ಶ್ರೀ ಎ. ನಾರಾಯಣಸ್ವಾಮಿ: ಎನ್‌ಕ್ವಾಯರಿ ಅಲ್ಲ ಅಧ್ಯಕ್ಷರೆ, ನಾನು ಅಲ್ಲಿ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಸಾರ್ವಜನಿಕರ ಹತ್ತಿರ ನಾನು ದಿನನಿತ್ಯ ಹೋಗಬೇಕಾಗಿದೆ.

ಅಧ್ಯಕ್ಷರು: ತಹಸೀಲ್ದಾರ್‌ವರು ಇಲ್ಲಿ ಇಲ್ಲ, just to defend him. The Minister has to defend him

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಮೊನ್ನೆ ತಾನೆ ಎರಡು-ಮೂರು ದಿವಸಗಳ ಹಿಂದೆ ಈ ವಿಷಯವನ್ನು ತಿಳಿಸಿರುತ್ತಾರೆ. ಕಳೆದ ಒಂದುವರೆ ವರ್ಷದಿಂದ ಇದು ನಡೆಯುತ್ತಿದೆ ಎಂದು ಮಾನ್ಯ ಶಾಸಕರು ಈಗ ಇಲ್ಲಿ ಹೇಳುತ್ತಿದ್ದಾರೆ. ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ಜಿಲ್ಲಾಧಿಕಾರಿಗಳೂ ಸಹ ನಮಗೆ ಈ ವಿಷಯವನ್ನು ತಿಳಿಸಿಲ್ಲ. ಅವರು ಹೇಳಿರುವುದರಿಂದ ನಾನು ವಿವರವಾಗಿ ಪರಿಶೀಲಿಸಿ ಅವರದ್ದು ಏನಾದರೂ ತಪ್ಪಿತಸ್ಥರಾಗಿದ್ದರೆ ಖಂಡಿತವಾಗಿ ನಾನು ಶಿಕ್ಷೆ ವಿಧಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಮೇಲೆ ಕೊಲೆ ಬೆದರಿಕೆ ಹಾಕುವಂಥದ್ದು, ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷರು ಏನಿದ್ದಾರೆ, ಅವರು ಶಿಫಾರಸ್ಸು ಮಾಡಿರುವುದಕ್ಕೆರ ಇವತ್ತಿನವರೆಗೂ ಒಂದು ಹಕ್ಕುಪತ್ರವನ್ನು ಕೊಡಲಿಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಗಳಿಗೆ ಸಮಯವನ್ನು ಕೊಡಿ, ಅವರು ವಿಚಾರ ಮಾಡಲಿ. ಅವರು ವಿಚಾರ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನೀವು ಬೇಗ ವಿಚಾರ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಇಲ್ಲಿ ಅಧಿಕಾರಶಾಹಿ ನಡೆಯುತ್ತಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಅದಕ್ಕೇ ನಾನು ಹೇಳಬೇಕು, ಕಳೆದ ಒಂದೂವರೆ ವರ್ಷದಿಂದ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ, ಅವರು ನನ್ನ ಗಮನಕ್ಕೆ ಅಂದರೆ ಸರ್ಕಾರದ ಗಮನಕ್ಕೆ ಇಲ್ಲಿಯವರೆಗೆ ತಂದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಮದಾಸ್‌ರವರೇ ನೀವು ಏಕೆ, ಮಾತ ನಾಡುತ್ತೀರಿ ನೀವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ರಾಮದಾಸ್: ಪೊಲೀಸ್ ಸ್ಟೇಶನ್‌ದಲ್ಲಿ ಒಬ್ಬ ತಹಸೀಲ್ದಾರ್‌ವರು ಶಾಸಕರ ವಿರುದ್ಧವಾಗಿ ಕಂಪ್ಲೇಂಟ್ ಕೊಟ್ಟು ಎಫ್‌ಐಆರ್ ಫೈಲ್ ಮಾಡುತ್ತಾರೆಂದರೆ ಹೇಗೆ? What is the meaning?

Mr. Speaker:- Shall I take the cognisance of all those things here? Come on, tell me. ಮಾನ್ಯ ಮಂತ್ರಿಗಳು ವಿಚಾರ ಮಾಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಕಳಿದ ಎರಡು-ಮೂರು ದಿವಸಗಳ ಹಿಂದೆ ಈ ವಿಷಯವನ್ನು ನನ್ನ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಅವರು ಮೊದಲೇ ನನ್ನ ಗಮನಕ್ಕೆ ತಂದಿದ್ದರೆ ಅದನ್ನು ಸರಿಪಡಿಸುತ್ತಿದ್ದೆ ಅಥವಾ ವಿಚಾರವನ್ನು ತಿಳಿಸುತ್ತಿದ್ದೆ. ಅವರು ಮೊನ್ನೆ ತಿಳಿಸಿರುವುದರಿಂದ ಅದನ್ನು ವಿಚಾರ ಮಾಡಿ ಅವರ ಮೇಲೆ ಏನು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಶಾಸಕರು ಹೇಳುವ ಆಪಾದನೆ ನಿಜವಾಗಿರಬೇಕು. ನಾರಾಯಣಸ್ವಾಮಿಯವರೇ, ನನಗೆ ಸ್ವಲ್ಪ ಸಮಯವನ್ನು ಕೊಡಿ.

ಶ್ರೀ ಎ. ನಾರಾಯಣಸ್ವಾಮಿ: ಸಮಿತಿಯ ಸದಸ್ಯರ ಮುಂದೆಯೇ ರೆಕಾರ್ಡ್ ಮಾಡಿದ್ದಾರೆ ತಹಸೀಲ್ದಾರವರು, ನನ್ನ ಹತ್ತಿರ ರೆಕಾರ್ಡ್ ಕಾಪಿ ಇದೆ.

ಅಧ್ಯಕ್ಷರು: ನಿಮ್ಮ ಹತ್ತಿರ ಏನು ದಾಖಲೆಗಳು ಇವೆ, ಅವುಗಳನ್ನು ನೀವು ಕಳುಹಿಸಿಕೊಡಿ. ಮಾನ್ಯ ಸಚಿವರೇ, ಇದನ್ನು ಆದಷ್ಟು ಬೇಗ ವಿಚಾರ ಮಾಡಿ. ಶ್ರೀ ನಾರಾಯಣಸ್ವಾಮಿಯವರೇ, ನೀವು ಆ ದಾಖಲೆ ಕೊಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಆ ಆಪಾದನೆ ಏನು ಇದೆ, ಅದನ್ನು ನೀವು ಕಳುಹಿಸಿಕೊಡಿ.

ಶ್ರೀ ಆರ್. ಅಶೋಕ್: ತಹಸೀಲ್ದಾರವರು ಈ ಕಮಿಟಿಗೆ ಸೆಕ್ರೆಟರಿಯವರು, ಈ ರೀತಿಯಾದರೆ ಯಾವ ರೀತಿಯಾಗಿ ಕರ್ತವ್ಯನಿರ್ವಹಿಸಬೇಕು, ಅಧ್ಯಕ್ಷರೆ? ಎಂಎಲ್ಎ ಮೇಲೆ ಕೇಸ್ ಹಾಕುತ್ತಾರೆಂದರೆ ಕರ್ತವ್ಯ ನಿರ್ವಹಿಸುವುದು ಹೇಗೆ?

ಅಧ್ಯಕ್ಷರು: ನೀವು ವಿಚಾರ ಮಾಡುವುದಕ್ಕೆ ಸಮಯವನ್ನು ಕೊಡುವುದಿಲ್ಲವೆಂದರೆ ಹೇಗೆ? ಮಾನ್ಯ ಸಚಿವರ ಸ್ಥಾನದಲ್ಲಿದ್ದರೆ ನೀವೇ ಏನು ಹೇಳುತ್ತಿದ್ದೀರಿ ಹೇಳಿ ನೋಡೋಣ. ಈ ಹೌಸ್‌ನಲ್ಲಿ ತಹಸೀಲ್ದಾರ್‌ವರು ಇಲ್ಲದಿರುವುದರಿಂದ ಮಾನ್ಯ ಸಚಿವರು ವಿಚಾರ ಮಾಡಬೇಕು ತಾನೆ? ಒನ್ ಆರ್ ಟು-ಡೇಸ್ ಸಮಯವನ್ನು ಕೊಡಿ. No, no. I don't appreciate this kind of attitude.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಎರಡು-ಮೂರು ದಿವಸದೊಳಗಡೆ ಮಾನ್ಯ ಸಚಿವರು ವಿಚಾರ ಮಾಡಿ ಈ ಸದನ ನಡೆಯುವುದರೊಳಗಾಗಿ ತನಿಖೆ ತಕ್ಷಣ ಕ್ರಮಕ್ಕೆಗೊಳ್ಳಲಿ.

(ಗೊಂದಲ)

ಶ್ರೀ ಆರ್. ಅಶೋಕ್: ಇಲ್ಲದಿದ್ದರೆ ಅಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್.(ನಗರಾಭಿವೃದ್ಧಿ ಸಚಿವರು): ಜಿರೋ ಅವರ್‌ನಲ್ಲಿ ಈ ರೀತಿಯಾದ ಡಿಮ್ಯಾಂಡ್ ಮಾಡಿದರೆ ಹೇಗಾಗುತ್ತದೆ. ಸರಿಸ್ವಾಮಿ ನೀವು ಹೇಳುವುದು, ಹೀಗೇ ಆಗಬೇಕೆಂದು ನೀವು ಕಂಡಿಷನ್ ಹಾಕಿಬಿಟ್ಟರೆ?

(ಗೊಂದಲ)

ಕಾಲಿಂಗ್ ಲೆಟೆನ್‌ಷನ್, ಅರ್ಧಗಂಟೆಯ ಕಾಲಾವಕಾಶ ಚರ್ಚೆ, ಇದರಲ್ಲಿ ನೀವು ಈ ರೀತಿಯಾಗಿ ಮಾಡಿದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸಚಿವರು ವಿಚಾರ ಮಾಡುತ್ತೇನೆಂದು ಹೇಳಿದ ಮೇಲೆಯೂ ಕೂಡ ನೀವು ಅದನ್ನೇ ಪರ್ಸೂ ಮಾಡುತ್ತಿದ್ದರೆ ಹೇಗೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ತಾವು ಹೇಳತಕ್ಕಂಥ ವಿಚಾರದ ಬಗ್ಗೆ ನಾನು ಗಮನದಲ್ಲಿಟ್ಟುಕೊಂಡು ವಿಚಾರಣೆ ಮಾಡುತ್ತೇನೆ, ತಕ್ಷಣ ನಾವು ಏನು ಕ್ರಮ ಕೈಗೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ, ಬೇಗನೆ ಮಾಡುತ್ತೇನೆ.

ಅಧ್ಯಕ್ಷರು: ಅದಷ್ಟು ಬೇಗನೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ದಯವಿಟ್ಟು ಸದನಕ್ಕೆ ಉತ್ತರವನ್ನು ಕೊಡಿ.

ಅಧ್ಯಕ್ಷರು: ಆಯಿತು.

4. ಗಮನ ಸೆಳೆಯುವ ಸೂಚನೆ:

ವಿಷಯ: ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ವಿಧಾನಸೌಧ ಬಡಾವಣೆಯ ನಿವಾಸಿಗಳಿಗೆ ತೀವ್ರ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ

ಶ್ರೀ ರುದ್ರಪ್ಪ ಎಂ. ಲಮಾಣಿ (ಬ್ಯಾಡಗಿ): ಮಾನ್ಯ ಅಧ್ಯಕ್ಷರೆ, ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ವಿಧನಸೌಧ, ಬಡಾವಣೆಯ ನಿವಾಸಿಗಳಿಗೆ ತೀವ್ರ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ 26ರಲ್ಲಿರುವ ವಿಧಾನಸೌಧ ಬಡಾವಣೆಯ ನಿವಾಸಿಗಳು ತೀವ್ರ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಬಗ್ಗೆ ಹಾಗೂ ಸದರಿ ಬಡಾವಣೆಗೆ ಕನಿಷ್ಟಪಕ್ಷ 3 ದಿನಕ್ಕೊಮ್ಮೆಯಾದರೂ ನೀರನ್ನು ಪೂರೈಸುವ ಬಗ್ಗೆ:-

ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುತ್ತದೆ. ಅದರಂತೆ, ವಾರ್ಡ್ ನಂ.26ರಲ್ಲಿ ಬರುವ ವಿಧಾನಸೌಧ ಬಡಾವಣೆಯ ನಿವಾಸಿಗಳಿಗೂ ಸಹ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದೆ. ಮಳೆ ಕೊರತೆಯಿಂದ ನೀರಿನ ಅಂತರ್ಜಲದ ಮಟ್ಟ ತೀರಾ ಕುಸಿದಿದ್ದು ಈಗಾಗಲೇ ಕೆಲವು ಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿರುತ್ತದೆ. ವಿಧಾನಸೌಧ ಬಡಾವಣೆಗೆ ಹಾಲಿಯಿರುವ ಎರಡು ಕೊಳವೆ ಬಾವಿಗಳಿಂದ ದೊರಕುತ್ತಿರುವ ನೀರಿನಿಂದ ಸುಮಾರು ಹತ್ತು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ಟ್ಯಾಂಕರ್ ಮುಖಾಂತರ ಸಹ ನೀರು ಪೂರೈಸಲಾಗುತ್ತಿದೆ. ಇತ್ತೀಚೆಗೆ ಮಾನ್ಯ ಲೋಕಸಭಾ ಸದಸ್ಯರ ನಿಧಿಯಿಂದ ಒಂದು ಬೋರ್‌ವೆಲ್ ಕೊರೆದಿದ್ದು, ಇದಕ್ಕೆ ನಗರಸಭೆ ವತಿಯಿಂದ ಪಂಪ್ ಮತ್ತು ಮೋಟರ್ ಅಳವಡಿಸಲಾಗಿದೆ. ಬರ ಪರಿಹಾರ ನಿಧಿಯಿಂದ ಹಾಲಿಯಿರುವ ಒಂದು ಕೊಳವೆ ಬಾವಿಯ ಆಳವನ್ನು ಹೆಚ್ಚಿಸಲಾಗಿದೆ. ಆದರೆ ನೀರು ಸಮರ್ಪಕವಾಗಿ ಸಿಕ್ಕಿರುವುದಿಲ್ಲ, ನೀರಿನ ಅಭಾವವನ್ನು ಮನಗಂಡು ವಾರ್ಡ್ ನಂ.26 ವಿಧಾನಸೌಧ ಬಡಾವಣೆಗೆ ನಗರಸಭಾ